ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-2 Issue 2, Sep-Oct 2020, 180-185**
**©*IIMRD*, Mysuru**
IIMRD JOURNALS
**www.iimrd.com**

# ಕಾಯಕ, ದಾಸೋಹ ಹಾಗೂ ನ್ಯಾಯದ ಪರಿಕಲ್ಪನೆ

**ಡಾ. ಎಸ್. ಬಿ. ರಾಠೋಡ**[1]

**ಪೀಠಿಕೆ**

ಪ್ರಾಚೀನ ಹಳಗನ್ನಡ, ಪೂರ್ವ ಹಳಗನ್ನಡ, ಹಳಗನ್ನಡ ಸಾಹಿತ್ಯದ ನಂತರ ದಿಟ್ಟತನದಿಂದ ಹೋರಾಡಿ, ಸಾಹಿತ್ಯದ ಬಂಧಗಳನ್ನು ಸಡಿಲುಗೊಳಸಿ, ಸಾಹಿತ್ಯದಲ್ಲಿ ಜನಸಾಮಾನ್ಯರಿಗೆ ನಾಯಕ ಪದವಿಯನ್ನು ಕೊಟ್ಟು, ಇಡೀ ವಿಶ್ವವನ್ನೇ ಜಂಗಮ ಲಿಂಗವಾಗಿ ಪರಿವರ್ತಿಸಿದ ಸಾಹಿತ್ಯವೆಂದರೆ ವಚನ ಸಾಹಿತ್ಯ. ಮಾನವನ ಒಳ ವಿಶ್ವದ ಚೈತನ್ಯದೊಡನೆ ಹೊರ ವಿಶ್ವವನ್ನು ಒಂದಾಗಿಸಿ, ಕುಲಗೋತ್ರಗಳನ್ನು ದೂರ ಸರಿಸಿ, "ಮಾನವ ಕುಲಂ ತಾನೊಂದೆ ವಲಂ" ಪಂಪನ ಹೇಳಿಕೆಯಂತೆ ಹನ್ನೆರಡನೆಯ ಶತಮಾನದಲ್ಲಿ ಧರ್ಮ ಸಾಮ್ರಾಜ್ಯ ಸ್ಥಾಪಿಸಿತಗೊಂಡಿತು. ಧರ್ಮವೆಂಬುದು ಸಾಮಾಜಿಕ ಜವಬ್ದಾರಿಯಿಂದ ಕೂಡಿದ ಆಂತರಿಕ ವಿಚಾರವೆಂಬ ನವ ಸಿದ್ದಾಂತವನ್ನೇ ಮಂಡಿಸಿತು. ಲೋಕದ ಆರಾಧಾನೆ ಮತ್ತು ಕಾಯಕ, ದಾಸೋಹ ಮಾಡಿದಷ್ಟೂ ದೇವರಿಗೆ ಹತ್ತಿರವಾಗುತ್ತೇವೆ ಎಂದು ವಚನ ಸಾಹಿತ್ಯ ಸಾರಿ ಹೇಳಿದೆ. ಮಾನವನ ಅಹಂಕಾರವು ಎಲ್ಲ ರೀತಿಯ ಸಮತಾಭಾವಕ್ಕೆ ಅಡ್ಡಿ ಮಾಡುವಂಥದ್ದು. ಆದ್ದರಿಂದ ಸಮಾನತೆಯ ಪ್ರತಿಪಾದಕರು ಅಹಂಕಾರದಿಂದ ಹೊರಬರಬೇಕಾಗುತ್ತದೆ. ಜೀವನವು ಪ್ರತಿ ಹೆಜ್ಜೆಯಲ್ಲಿಯೂ ಪ್ರೀತಿ, ಕರುಣೆ ತೋರಬೇಕಾಗುತ್ತದೆ. ಜಾತಿ, ಮತ, ಪಂಥ ಮತ್ತು ಕುಲಮದದಿಂದ ಹೊರಬರಬೇಕಾಗುತ್ತದೆ. ನಮ್ಮಲ್ಲಿರುವ ಸಂಪತ್ತನ್ನು ದೇವರ ಸೊತ್ತು ಎಂದು ತಿಳಿದು ಲೋಕ ಕಲ್ಯಾಣಕ್ಕಾಗಿ ದಾಸೋಹ ನಡೆಸ ಬೇಕಾಗುತ್ತದೆ. ಬಡವ–ಶ್ರೀಮಂತ, ಹೆಣ್ಣು–ಗಂಡು, ಮೇಲು–ಕೀಳು ಎಂಬ ಬೇದಭಾವವನ್ನು ತೊರೆದು ಎಲ್ಲರ ಬಗ್ಗೆ ಸಮಭಾವನ್ನು ತಾಳಬೇಕಾಗುತ್ತದೆ. ಇಡೀ ಸೃಷ್ಠಿಯು, ಸೃಷ್ಟಿಕರ್ತನದೇ ಆಗಿರುವುದರಿಂದ ನಾವು ಈ ಲೋಕದ ಸಂಪತ್ತಿನ ಮೇಲೆ ನಮ್ಮ ವೈಯಕ್ತಿಕ ಹಕ್ಕಿದೆ ಎಂದು ಪ್ರತಿಪಾದಿಸದೇ ಅದರ ಮೇಲೆ ಪ್ರತಿಯೊಬ್ಬರ ಹಕ್ಕಿದೆ ಎಂಬ ಮೂಲ ಸತ್ಯವನ್ನು ಶರಣರು ಕಾಯಕ, ದಾಸೋಹದ ಮುಖೇನ ತಿಳಿಸಿಕೊಟ್ಟರು.

**ಕಾಯಕ ಹಾಗೂ ದಾಸೋಹ**

ವಚನಕಾರರು ಆರ್ಥಿಕ ಅಸಮಾನತೆಯನ್ನು ಅಳಿಸಿ, ಸಮಾನತೆಯ ಸಾಮ್ರಾಜ್ಯವನ್ನು ಸಂಸ್ಥಾಪಿಸಲು, ಪ್ರತಿಯೊಬ್ಬರೂ ಅನುಸರಿಸಲು ರೂಪಿಸಿದ ಶಾಸನ, ನಡೆದು ತೋರಿದ ಆಚರಣೆ ಅವಿಸ್ಮರಣಿಯವಾದುದು, ಆದರ್ಶವಾದುದು, ಸುಲಭ ಮತ್ತು ಶ್ರೇಷ್ಠವಾದುದು. ಆರ್ಥಿಕ ಅಸಮಾನತೆ ಅಳಿಸಲು ಕಾಯಕ ಮತ್ತು ದಾಸೋಹವೆಂಬ ಮೂಲ ತಳಪಾಯ ಹಾಕಿದರು. ಸತ್ಯ ಶುದ್ದ ಕಾಯಕದಿಂದ ಗಳಿಸುವುದು, ಗಳಿಸಿದ

---

*[1] ಮುಖ್ಯಸ್ಥರು ಕನ್ನಡ ವಿಭಾಗ (ಮಾರ್ಗದರ್ಶಕರು, ಹಂಪಿ. ವಿ.ವಿ.) ಎಸ್.ಎಸ್ .ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ.*

ಸಂಪತ್ತು ಒಬ್ಬರ ಒಡೆತನಕ್ಕೆ ಸಂಗ್ರಹವಾಗದೆ ದಾಸೋಹದ ಮೂಲಕ ಸಮಾಜಕ್ಕೆ ಸಮವಾಗಿ ಬಳಸುವುದು. ಹೀಗೆ ಬಸವಾದಿ ಶರಣರು ಆರ್ಥಿಕ ಸಮಾನತೆಗಾಗಿ ರೂಪಿಸಿದ ಅರ್ಥ ನೀತಿಯ ಮೂಲ ಸೂತ್ರ ಇದಾಗಿದೆ. ಲೋಕದಲ್ಲಿ ಬಾಳುವ ನಾಗರಿಕ ಯಾರೇ ಆಗಿರಲಿ ಕಾಯಕ ಕಡ್ಡಾಯವೆಂದರು ಶರಣರು. ಧರ್ಮ, ದೇವರ ಹೆಸರಿನಲ್ಲಿ ಪಂಡಿತ ಪೌರೋಹಿತ್ಯದ ಹೆಸರಿನಲ್ಲಿ ದುಡಿಮೆಯಿಲ್ಲದೆ, ಸೌಲಭ್ಯಗಳನ್ನು ಪಡೆವುವ ಸೋಮಾರಿಗಳಿಗೆ ಅನುತ್ಪಾದಕರಿಗೆ ಶರಣ ಸಂಸ್ಕೃತಿಯಲ್ಲಿ ಸ್ಥಳವಿಲ್ಲ.

***ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ***
***ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುಲಹರಿವುದು***
***ಜಂಗಮವಾದರೂ ಕಾಯಕದಿಂದಲೇ ತನ್ನವೇಷದ ಪಾಶಹರಿಸುವುದು***
***ಗುರುವಾದರೂ ಚರಸೇವೆ ಮಾಡಬೇಕು***
***ಲಿಂಗವಾದರೂ ಚರಸೇವೆ ಮಾಡಬೆಕು***
***ಜಂಗಮವಾದರೂ ಚರಸೇವೆ ಮಾಡಬೇಕು***
***ಇದು ಚಂದೇಶ್ವರ ಲಿಂಗದ ಅರಿವು ಕೆಳಾ ಪ್ರಭುವೆ.***

ಎಂದು ಕಾಯಕ ದಾಸೋಹ ನಿಷ್ಟ ನೂಲಿಯ ಚಂದಯ್ಯ ನುಡಿಯುತ್ತಾರೆ. ಕಾಯಕವಿಲ್ಲಿದ ಗುರು ಲಿಂಗ ಜಂಗಮ ಯಾರೆ ಇರಲಿ ಶರಣರಲ್ಲಿ ವಿಶೇಷ ರಿಯಾಯಿತಿ ಇಲ್ಲ. ಅಷ್ಟೇ ಅಲ್ಲ ಜಂಗಮರೂಪಿ ಸಮಾಜ ಸೇವೆಗೆಂದು ಮಾಡುವ ಕಾಯಕದಲ್ಲಿ ನಿರತನಾದಾಗ ಎಲ್ಲರ ಹಂಗನ್ನು ಹರಿದುಕೊಂಡು ಸಮರ್ಪಣ ಭಾವದಿಂದ ಕರ್ತವ್ಯ ನಿರತನಾಗಿರಬೇಕೆಂದು ಒತ್ತುಕೊಡುತ್ತಾನೆ.

***ಕಾಯಕದಲ್ಲಿ ನಿರತನಾದರೆ ಗುರುದರುಶನವಾದರು ಮರೆಯಬೇಕು***
***ಲಿಂಗಪೂಜೆಯಾದರೂ ಮರೆಯಬೇಕು***
***ಜಂಗಮ ಮುಂದಿದ್ದರೂ ಹಂಗು ಹರಿಯಬೇಕು***
***ಕಾಯಕವೇ ಕೈಲಾಸವಾದ ಕಾರಣ***
***ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದ ಒಳಗು.***

ಎಂದು ವಚನ ರೂಪಿಸುತ್ತಾನೆ. ತಾನು ಕಾಯಕದ ಮೂಲಕ ಸಂಪಾದಿಸಿದ ಸಂಪತ್ತನ್ನು ತಾನು ತನ್ನವರಿಗೆನ್ನದೆ ಸಂಗ್ರಹಿಸಿಡದೆ ಜಂಗಮರೂಪಿ ಚೇತನ ಸಮಾಜಕ್ಕೆ ದಾಸೋಹದ ಮೂಲಕ ಸಮರ್ಪಿಸಿ ಸಂತೃಪ್ತನಾಗಿರು ಶರಣರ ಬದುಕು ಸತ್ಯ, ಸದಾಚಾರ, ಸಮತೆ, ಶಾಂತಿಯಿಂದ ಸಮೃದ್ಧವಾಗಿರುತ್ತದೆ. ಅಂಥ ಸಂತೃಪ್ತಿಯನಿತ್ತ ಮಹಾಗುರು ಬಸವಣ್ಣನವರು ಕಾಯಕವೆಂಬ ಕೈಲಾಸದಲ್ಲಿರುವ ಸ್ವಾವಲಂಬಿ ಶರಣನೆ ಶಿವನೆಂದು ಸಾರಿದ್ದಾರೆ.

***ಮಾಡುವ ನೀಡುವ ಭಕ್ತನ ಕಂಡರೆ ನಿಧಿನಿಧಾನವ ಕಂಡಂತಾಯಿತು***
***ಪಾದೋದಕ ಪ್ರಸಾದ ಜೀವಿಯ ಕಂಡರೆ ಹೋದ ಪ್ರಾಣ ಬಂದಂತಾಯಿತು***
***ಅನ್ಯರ ಮನೆಗೆ ಹೋಗಿ ತನ್ನಧರವ ಹೊರೆಯದ***
***ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು.***

ತಾನು ಕಾಯಕ ಮಾಡಿ ದಾಸೋಹದ ಮೂಲಕ ನೀಡುವವನಾಗಿರಬೇಕು. ಕಾಯಕ ವಿಲ್ಲದೆ ಪರಾವಲಂಬಿಯಾಗಿ ಅನ್ಯರ ಮನೆಗೆ ಹೋಗಿ ತನ್ನುದರವನ್ನು ಅನ್ಯರ ಶ್ರಮದಿಂದ ಹೊರೆಯದ ಶರಣರು ನಿಶ್ಚಯವಾಗಿ ಸಾಕ್ಷಾತ್ ಶಿವಸ್ವರೂಪರು. ಅನ್ಯರ ಆದಾಯದಿಂದ ತನ್ನುದರವ ಹೊರೆವ ಪರಾವಲಂಬಿ ಮಾಹಾಪರಾಧಿ ಎಂದು ಮಹಾಗುರು ಬಸವಣ್ಣನವರು ಪ್ರತಿಯೊಬ್ಬ ಪ್ರಜೆಗೂ ರಾಷ್ಟ್ರ ಪ್ರಜ್ಞೆಯನ್ನು ಮೂಡಿಸಿದ್ದಾರೆ. ದುಡಿಯದೆ ದೇವರ ಪ್ರತಿನಿಧಿಗಳೆಂದು ಸಕಲ ಸುಖ ಸೌಲಭ್ಯಗಳನ್ನು ಭೋಗಿಸುವ ಸೋಮಾರಿಗಳ ಸಂಚನ್ನು ಬಯಲು ಮಾಡಿದ್ದಾರೆ. ತಾವು ದುಡಿಯದೆ ದೇಶದ ಸಂಪತ್ತಿಗೆ ಒಡೆಯರೆಂಬ ಬಂಡವಾಳಶಾಹಿಗಳ ಬಣ್ಣ ಬಯಲಿಗೆಳೆಯುತ್ತಾರೆ. ಅಣ್ಣ ಬಸವಣ್ಣನವರು ಮಹಾಮಂತ್ರಿಯಾಗಿದ್ದರೂ ತಮ್ಮ ಕಾಯಕದಿಂದ ಸಂಪಾದಿಸಿದ ಸಂಪತ್ತನ್ನು ಸಮಾಜ ಸೇವೆಗಾಗಿಯೇ ಸವೆಸುತ್ತಿದ್ದರು. ಇಂದಿಗೆ ನಾಳಿಗೆ ಎಂದು ಸಂಪತ್ತು ಸಂಗ್ರಹಿಸಿದಡೆ ಸಮಾಜದ ಸಂಪತ್ತನ್ನು ಸಮಾಜ ಸೇವೆಗಾಗಿಯೇ ಮೀಸಲಾಗಿಡುತ್ತಿದ್ದರು.

***ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ***
***ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ ಬೇಕೆಂದನಾದಡೆ***
***ನಿಮ್ಮಾಣೆ, ನಿಮ್ಮ ಪ್ರಮಥರಾಣೆ! ನಿಮ್ಮ ಶರಣರಿಗಲ್ಲದೆ***
***ಮತ್ತೊಂದನೆಯೆ , ಕೂಡಲ ಸಂಗಮದೇವಾ***

ಎಂದು ತನಗೆ ತನ್ನವರಿಗೆ ಇಂದಿಗೆ ನಾಳಿಗೆಬೇಕೆಂದು ಸಂಗ್ರಹಿಸುವುದರಿಂದ ಒಂದೆಡೆ ಸಂಪತ್ತು ಸಂಗ್ರಹವಾಗಿ ಬಡವ ಬಲ್ಲಿದರೆಂಬ ವರ್ಗಭೇದ ಉದಯಸಿ, ವರ್ಗ ಕಲಹಕ್ಕೆ ನಾಂದಿಯಾಗಬಾರದೆಂಬ ಅತಿ ಸೂಕ್ಷ್ಮ ದೃಷ್ಠಿಯ ಅರ್ಥನೀತಿಯನ್ನು ಅವರು ಲೋಕಕ್ಕೆ ನೀಡಿದ್ದಾರೆ.

ಕಾಯಕಕ್ಕೆ ಎರಡು ಸ್ತರಗಳಿವೆ. ಒಂದು ಸಾಮಾಜಿಕ, ಇನೊಂದು ಆಧ್ಯಾತ್ಮಿಕ ಮೇಲ್ನೋಟಕ್ಕೆ ಪ್ರಾಪಂಚಿಕ ಕೆಲಸವಾಗಿ ಕಂಡರೂ, ಅದು ತನ್ನ ಆಧ್ಯಾತ್ಮಿಕ ತಳಹದಿಯ ಮೌಲ್ಯಗಳ ಮುಖಾಂತರ ಜಾತಿಬೇಧವಿಲ್ಲದ ಹೊಸ ಸಮಾಜವನ್ನು ನಿರ್ಮಿಸಬಲ್ಲದು ಜನ ಸಾಮಾನ್ಯರಲ್ಲಿ ಹುದುಗಿಕೊಂಡಿರುವ ಅಂತಃಶಕ್ತಿಯನ್ನು ಕುದುರಿಸಿ, ಜನಜಾಗೃತಿಯನ್ನುಂಡು ಮಾಡಿ, ಸಾಮಾಜಿಕ ಕ್ರಾಂತಿಯನ್ನು ಹುಟ್ಟಿಸಬಲ್ಲದು, ಸಾಮಾಜಿಕ ಸಮಾನತೆಯನ್ನು ತರಬಲ್ಲದು, ಅಷ್ಟೇ ಅಲ್ಲ ದುಡಿಮೆಯನ್ನು ಮಾನವನ ಪರಿಪೂರ್ಣ ವಿಕಾಸದ ಸಾಧನವನ್ನಾಗಿ ರೂಪಾಂತರಿಸಬಲ್ಲದು. ಶಿವಶರಣರ ಅವಲೋಕನದಲ್ಲಿ ಅದ್ವೈತ ಭಾವದಿಂದ ಮಾಡಿದ ಕಾಯಕ ಕೇವಲ ಮುಕ್ತಿಯಾತ್ಮಕ ಮಾತ್ರವಲ್ಲದೆ, ಸಾಮಾಜಿಕ ಸ್ತರದಲ್ಲಿ ಸಮಾನತೆಯನ್ನು ತರಬಲ್ಲ ದುಡಿಮೆಯನ್ನು ಯೋಗವನ್ನಾಗಿ ಮಾಡಬಲ್ಲದೆಂದು ಹೇಳಬಹುದು.

ಬಸವಾದಿ ಪ್ರಮಥಮರು ಜಗತ್ತಿಗೆ ಕೊಟ್ಟ ದೊಡ್ಡ ಕೊಡುಗೆಯೆಂದರೆ ಕಾಯಕ, ದಾಸೋಹ, ಪ್ರಸಾದ ಇವು ಮೂರು ಒಂದನ್ನೊಂದು ಸರಪಳಿಯಂತೆ ಹೆಣೆದುಕೊಂಡಿವೆ. ಕಾಯಕದಿಂದ ಬಂದ ದ್ರವ್ಯವನ್ನು ಸಮಾಜಕ್ಕೆ ಅರ್ಪಿಸುವುದು ದಾಸೋಹವಾಗುತ್ತದೆ. ದಾಸೋಹಿಗೆ ಸಿಗುವ ನಿಷ್ಕಾಮ ಫಲ ಪ್ರಸಾದವಾಗತ್ತದೆ. ಕಾಯಕವಿಲ್ಲದೆ ದಾಸೋಹವಿಲ್ಲ. ಹೀಗೆ ಕಾಯಕದ ತಳಹದಿಯ ಮೇಲೆ ದಾಸೋಹ ತತ್ವಗಳು ನಿಂತುಕೊಂಡಿವೆ.

ದಾಸೋಹವೆಂದರೆ ಹಸಿದು ಬಂದವರಿಗೆ ಹಿಡಿ ಅನ್ನ ನೀಡುವುದೆಂದು ತಿಳಿದುಕೊಂಡಿರುವುದು ತಪ್ಪು ಹಾಗೆ ತಿಳಿದುಕೊಂಡಿರುವವರು ಬಹಳ ಜನರಿದ್ದಾರೆ. ಇದು ಕೇವಲ ಅನ್ನ ದಾಸೋಹವಾಗಬಹುದು. ದಾಸೋಹ ತತ್ವದ ವಾಪ್ತಿಯು ಬಹಳ ವಿಸ್ತಾರವಾಗಿದೆ. ನಾವು ಅದನ್ನು ಅನ್ನದಾಸೋಹಕ್ಕೆ ಮಾತ್ರ ಸೀಮಿತಗೋಳಿಸಿದರೆ, ದಾಸೋಹ ತತ್ವಕ್ಕೆ ಅಪಚಾರ ಮಾಡಿದಂತಾಗುತ್ತದೆ. ಪ್ರತಿಯೊಂದು ಜೀವಿಯಲ್ಲಿ ಶಿವಸ್ವರೂಪವನ್ನು ಕಂಡು ಅಹಂಕಾರಾದಿಗಳನ್ನು ಅಳಿದು, ಆತ್ಮಸಮರ್ಪಣೆ ಭಾವದಿಂದ ಸಮಾಜ ಸೇವೆಗೆ ತನು, ಮನ, ಧನಗಳನ್ನು ಮೀಸಲಾಗಿಡುವುದು ದಾಸೋಹವಾಗಿದೆ. ದೇವರಲ್ಲಿ ದೇವತ್ವ ಕಾಣುವುದರ ಜೊತೆಗೆ ಮಾನವನಲ್ಲಿ ದೈವೀಭಾವವನ್ನು ಕಂಡು ಅವನನ್ನು ದೇವರ ಸ್ವರೂಪದಲ್ಲಿ ಗೌರವಿಸುವುದು ದಾಸೋಹವಾಗಿದೆ. ಮಾನವನ ಸೇವೆಗೆ ಅದು ಹೆಚ್ಚು ಮಹತ್ವಕೊಡುತ್ತದೆ.

ದಾಸೋಹದಲ್ಲಿ ಕಾಣುವ ಮುಖ್ಯ ಅಂಶವೆಂದರೆ ವಿನಮ್ರತೆ, ದೈನ್ಯತೆ, ತನ್ನತನವನ್ನು ಸಂಪೂರ್ಣ ಬಿಟ್ಟುಕೊಡುವುದನ್ನು, ನನ್ನದೆಂಬ ಅಹಂಕಾರವನ್ನು ನಾಶಪಡಿಸುವಿಕೆ ಎಂದು ಇಲ್ಲಿ ತಿಳಿಸಲಾಗಿದೆ.

*'ಶಿವೋಹಂ' ಎಂಬುದು ಬಹಿರಂಗದ ಮದ*
*'ಸೋಹಂ' ಎಂಬುದು ಅಂತರಂಗದ ಮದ ಈ 'ಶಿವೋಹಂ' ಆಗಲಿ 'ಸೋಹಂ'*

ಆಗಲಿ ದಾಸೋಹಿಗೆ ಮಾರಕ. ಅದಕ್ಕೆ ಇವೆರಡನ್ನೂ ಬಿಟ್ಟು 'ದಾಸೋಹಂ' ಎಂದೆನಿಸಯ್ಯಾ ಎಂಬುವುದು ಬಸವಣ್ಣನವರ ಅಭಿಪ್ರಾಯವಾಗಿದೆ. ಹೀಗೆ ವಿನಮ್ರ ಭಾವನೆಯಿಂದ ಬದುಕುತ್ತಿರುವ ಶರಣರು ದಾಸೋಹಕ್ಕಾಗಿ ಸರ್ವಸ್ವವನ್ನೂ ಮೀಸಲಿಟ್ಟಿದುದನ್ನು ಕಾಣತ್ತೇವೆ. ಶರಣರು ಮಾಡಿದೆಲ್ಲವೂ ಕಾಯಕವಾಯಿತು. ನೀಡಿದ್ದೆಲ್ಲವೂ ದಾಸೋಹವಾಯಿತು, ಪಡೆದೆಲ್ಲವೂ ಪ್ರಸಾದವಾಯಿತು. ಈ ಮಾಡುವ, ನೀಡುವ ಪಡೆಯುವ ಪರಿಕರವೇ ಅವರ ಆತ್ಮಶುದ್ದಿಗೆ ಬೃಹತ್ ಮಾರ್ಗವಾಯಿತು. ಅನೇಕ ಉಜ್ವಲ ತತ್ವವನ್ನು ಕೊಟ್ಟ ಬಸವಣ್ಣನವರು ದಾಸೋಹ ತತ್ವವನ್ನು ಕೊಟ್ಟರು. ಆದರೆ ಕೊಟ್ಟಿದನ್ನು ಕೊಟ್ಟೆ ಎಂದು ಹೇಳಲಿಲ್ಲ. ಶರಣರ ಮಧ್ಯದಲ್ಲಿದ್ದು ಅವರಿಂದಲೇ ಪಡೆದೆ ಎಂಬುದು ಅವರ ವಿನ್ರಮತೆ. ತನಗಿಂತಲೂ ಎಲ್ಲರೂ ಹಿರಿಯರು ಅವರಲ್ಲಿ ತಾನು ಕಿರಿಯ ಎನ್ನುತ್ತ ಬಸವಣ್ಣನವರು ಒಂದು ಕಡೆಗೆ ಹೀಗೆ ಹೇಳುತ್ತಾರೆ.

*ಮರನ ನೆರಳನಲ್ಲಿದ್ದು ತನ್ನ ನೆರಳಲನರಸಬಹುದೇ*
*ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ*
*ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ*
*ಆನು ಭಕ್ತನೆಂಬ ನುಡಿ ಸುಡದೆ ಕೊಡಲ ಸಂಗಮದೇವಾ!*

ಹೀಗೆ ಶರಣರ ನೆರಳಲ್ಲಿದ್ದ ಬಸವಣ್ಣನ ತನ್ನ ವ್ಯಕ್ತಿತ್ವ ಅಸ್ತಿತ್ವವನ್ನು ಹುಡುಕಿಕೊಳ್ಳಲಿಲ್ಲ ಅದನ್ನೂ ದಾಸೋಹಗೈದಿದ್ದ. ನಿಮ್ಮ ಶರಣರ ಮುಂದೆ ನಾನು ಭಕ್ತನೂ ಅಲ್ಲ, ಯುಕ್ತನೂ ಅಲ್ಲ, ನಾನು ಭಕ್ತನೆಂಬ ನುಡಿ ಸುಡಲಿ ಎಂದು ಹೇಳುತ್ತಾರೆ. ಇದೆಲ್ಲವನ್ನು ನೋಡಿದರೆ ಬಸವಣ್ಣನವರು ತಮ್ಮದೆಲ್ಲವನ್ನೂ (ತನು, ಮನ, ಧನ) ಸರ್ವಶರಣರಿಗೆ ಅರ್ಪಿಸಿದ್ದರು. ಅವರೇ ಎಲ್ಲ ಶರಣರ ಮುಖಾಂತರ ಪ್ರಸಾದವಾಗಿ ಹೊರಬಂದರು. ತಮ್ಮ ಬದುಕಿನ ಶ್ರಮವೆಲ್ಲ ಕಾಯಕವಾಗಿ ತಮ್ಮ ಬದುಕೆಲ್ಲವೂ ದಾಸೋಹವಾಗಿ, ತಮ್ಮ

ಬದುಕೇ ಪ್ರಸಾದವಾಗಿ ಪಡೆದವರು, ಹೀಗೆ ಬಸವಣ್ಣನವರ ದಾಸೋಹತತ್ವ ವಿಶ್ವಮಾನ್ಯ, ನಿತ್ಯ ನೂತನವಾದದ್ದು ಎಂದು ಹೆಮ್ಮೆಯಿಂದ ಹೇಳಬಹುದು. ಪ್ರಸ್ತುತ ಸಂದರ್ಭದಲ್ಲಿ ದಾಸೋಹ ಪರಂಪರೆ ಮಠ ಮಾನ್ಯಗಳಲ್ಲಿ ಉಳಿದುಕೊಂಡಿದೆ. ಕಾಯಕ ಪರಂಪರೆ ಆಮೆ ಗತಿಯಲ್ಲಿ ಸಾಗುತಿರುವುದು ವಿಪರ್ಯಾಸದ ಸಂಗತಿ.

**ಸಾಮಾಜಿಕ ನ್ಯಾಯ**

ಮಾನವನ ಜೀವನ ಆರಂಬದಿಂದಲೇ ಸಾಮಾಜಿಕ ವ್ಯವಸ್ಥೆಯ ಒಂದು ಪ್ರಮುಖ ಘಟಕ. ಸಾಮಾಜಿಕ ವ್ಯವಸ್ಥೆ ವ್ಯಕ್ತಿಯ ಜನ್ಮ, ವಿದ್ಯೆ, ಧರ್ಮ, ದುಡಿಮೆ, ವ್ಯವಹಾರ, ಆರ್ಥಿಕ ವ್ಯವಸ್ಥೆಯ ಏರು ಪೇರುಗಳು, ಆಗು ಹೋಗುಗಳು ವ್ಯಕ್ತಿಯ ಬದುಕಿನ ಅನ್ಯಾಯ, ಅಸಮಾನತೆ, ಅವ್ಯವಸ್ಥೆಗಳಿಂದ ಕೂಡಿದ್ದಲ್ಲಿ ವ್ಯಕ್ತಿಯು ಅಸಹಾಯಕನಾಗಿ ಅನಿವಾರ್ಯವಾಗಿ ಬದುಕಿನ ಹಲವು ಸೌಲಭ್ಯಗಳಿಂದ ವಂಚಿತವಾಗಿ ಹತಾಶೆಯ ಹಾದಿಯಲ್ಲಿ ಬಾಳ ಪಯಣ ಬೆಳೆಸುತ್ತಿದ್ದಾನೆ. ಇವು ಸಮಾಜದ ಏರು–ಪೇರುಗಳು ಇವುಗಳನ್ನು ವಚನಕಾರರು ಒಂದು ವ್ಯವಸ್ಥಿತ ರೂಪ ಕೊಡಲು ಪ್ರಯತ್ನಪಟ್ಟರು. ಸಮಾನತೆ ಸುವ್ಯವಸ್ಥೆಗಳಿಂದ ಕೂಡಿದ ಸಮಾಜದಲ್ಲಿ ವ್ಯಕ್ತಿಯು ಸಮಾಜದಲ್ಲಿನ ಸಕಲ ಸೌಲಭ್ಯಗಳನ್ನು ಪಡೆದುಕೊಂಡು ಸಮಾನವಾಗಿ ಸುಖ, ಸಂತೃಪ್ತಿ, ಮಾನ, ಸನ್ಮಾನ ಮರ್ಯಾದೆಗಳಿಂದ ಬಾಳ ಬಟ್ಟೆಯಲ್ಲಿ ಹಾಯಾಗಿ, ಮುನ್ನಡೆಯುತ್ತಾನೆ. ಆದ್ದರಿಂದ ಸಾಮಾಜಿಕ ವ್ಯವಸ್ಥೆಯು ಪ್ರತಿಯೊಬ್ಬ ವ್ಯಕ್ತಿಯ ಜೀವನದ ಅನಿವಾರ್ಯವಾದ ಮೂಲಭೂತ ಆಶ್ರಯ ಸ್ಥಾನವಾಗಿದೆ. ಕಾರಣ ಸಾಮಾಜಿಕ ಸ್ವರೂಪವು ಎಲ್ಲರ ಬಾಳಿನಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಸಮತೆ, ಸ್ವತಂತ್ರತೆ, ಶೋಷಣೆ ರಹಿತ ವ್ಯವಸ್ಥೆಯಿಂದ ಕೂಡಿದುದಾಗಿರಬೇಕು. ಆಗ ದೇಶವು ಸತ್ಯ, ಸದಾಚಾರ ಸುಖ–ಶಾಂತಿ ಸಮೃದ್ಧಿಗಳಿಂದ ಸಂಪದ್ಭರಿತವಾಗಿರುತ್ತದೆ. ಸಮತೆ ಸಾಮರಸ್ಯಗಳಿಂದ ತುಳುಕುತ್ತದೆ. ದೇಶದ ಐಕ್ಯತೆ ಅಖಂಡತೆ ಸಾಧಕವಾಗುತ್ತದೆ. ಆದರೆ ದುರ್ಬಲರ ಮೇಲಿನ ದೌರ್ಜನ್ಯದಿಂದ ಸಕಲರಿಗೂ ಸಮಾನ ಸೌಕರ್ಯಗಳು ಬದುಕಿನ ಅನಿವಾರ್ಯ ಅವಕಾಶಗಳು ಅಳವಡದೆ ಕೆಲವರು ದುಃಖದಲ್ಲಿದ್ದು, ಕೆಲವರು ಮಾತ್ರ ಸುಖಿಗಳಾಗಿದ್ದು ಜಗತ್ತು ಅವ್ಯವಸ್ಥೆಯ ಆಗರವಾಗಿದೆ. ಅದಕ್ಕೆ ಮಾನವ ಮಾನವರಲ್ಲಿ ಮೇಲು ಕೀಳಿನ ತಾರತಮ್ಯವನ್ನು ಈ ಅವ್ಯವಸ್ಥೆಯ ಸಮರ್ಥನೆಗೆ ಸಾಧನವಾಗಿ ಬಳಸುತ್ತ ಬರಲಾಗಿದೆ. ಇವುಗಳಲ್ಲಿ ವರ್ಣವ್ಯವಸ್ಥೆ, ವರ್ಗವ್ಯವಸ್ಥೆ, ಜಾತಿ ಪದ್ಧತಿ, ಆಶ್ರಮ ಪದ್ಧತಿ, ಲಿಂಗಭೇದ, ವಯೋಭೇದ, ದಾಸ್ಯಪದ್ಧತಿ, ಹೀಗೆ ಪ್ರಮುಖವಾಗಿ ಕಾಣುತ್ತವೆ.

**ಸಮಾಜದ ಕ್ರೂರ ಪದ್ಧತಿ ಮತ್ತು ಹೋರಾಟ**

ಚಾತುರ್ವರ್ಣ ವ್ಯವಸ್ಥೆಯಲ್ಲಿ ಹುಟ್ಟಿಕೊಂಡ ಜಾತಿ ಪದ್ಧತಿ ಕ್ರೂರವಾದ ರಾಜಕೀಯ ಶಾಸನಗಳಂತೆ ರೂಪಗೊಂಡವು. ಅವು ಮನುಷ್ಯರನ್ನು ಮನುಷ್ಯರಂತೆ ಬದುಕಲು ಬಿಡಲಿಲ್ಲ. ಮಾನವ ಸಮಾಜದ ಮೇಲೆ ಅಸ್ಪೃಶ್ಯ ರೂಪದಲ್ಲಿ ಕ್ರೂರವಾಗಿ ದಾಳಿ ಮಾಡಿದವು. ಅಸ್ಪೃಶ್ಯರು ಊರ ಹೊರಗೆ ವಾಸಿಸಬೇಕು. ಅವರಿಗೆ ಭದ್ರವಾದ ಮನೆ ಇರಬಾರದು. ಹೆಣಗಳ ಮೇಲಿನ ಬಟ್ಟೆಗಳನ್ನು ಧರಿಸಬೇಕು. ಬೆಳ್ಳಿ, ಬಂಗಾರದ ಆಭರಣಗಳನ್ನು ಧರಿಸಕೂಡದು. ಕಬ್ಬಿಣದ ಬಳೆಗಳನ್ನು ಧರಿಸಬೇಕು. ದನಕರಗಳನ್ನು ಸಾಕಬಾರದು. ನಾಯಿಗಳನ್ನು ಮಾತ್ರ ಸಾಕಬೇಕು. ವಿದ್ಯ ಕಲಿಯಬಾರದು. ಶಾಸ್ತ್ರಗಳನ್ನು ಓದಬಾರದು. ಆತನ ನೆರಳು

ಉತ್ತಮ ಜಾತಿಯವರ ಮೇಲೆ ಬೀಳಬಾರದು. ಆದ್ದರಿಂದ ಅವರು ಹಗಲು ವೇಳೆ ಊರೊಳಗೆ ಬರಬಾರದು. ಬರುವುದೆ ಆದಲ್ಲಿ ನಡು ಮಧ್ಯಾಹ್ನ ನೆರಳು ತನ್ನ ಕಾಲಡಿಯಲ್ಲಿದ್ದಾಗ ಮಾತ್ರ ಸೂಕ್ತ ನಿಗಧಿತ ಲಾಂಛನ ಧರಿಸಿಕೊಂಡು ಕಬ್ಬಿಣದ ತಟ್ಟೆಯಿಂದ ಸದ್ದು ಮಾಡುತ್ತಾ ಬರಬೇಕು. ಹೀಗೆ ಕಠೋರ ಕಾಯಿದೆಗಳನ್ನು ಜಾರಿಗೋಳಿಸಲಾಗಿತ್ತು. ಅಷ್ಟೇ ಅಲ್ಲ ಅವರ ದೃಷ್ಟಿಯಲ್ಲಿ ಅಂತ್ಯಜರು ಮನುಷ್ಯರೆ ಅಲ್ಲ ಪಶು. ನಾಯಿ ಬೆಕ್ಕುಗಳಿಗಿಂತಲೂ ಕೀಳು. ಬೆಕ್ಕು ನಾಯಿಗಳು ಸುಲಭವಾಗಿ ಮೇಲು ಜಾತಿಯವರ ಮನೆಯನ್ನು ಪ್ರವೇಶಿಸಬಹುದು, ಅವುಗಳನ್ನವರು ಮುಟ್ಟಬಹುದು. ಆದರೆ ಅಸ್ಪೃಶ್ಯರು ಅವರ ಅಂಗಳದಲ್ಲಷ್ಟೇ ಅಲ್ಲ, ಬೀದಿಯಲ್ಲೂ ಅಡ್ಡಾಡಬಾರದೆಂಬ ಅಮಾನವೀಯವಾದ ಕಾಯಿದೆಗಳನ್ನು ರೂಪಿಸಿ ಆಚರಿಸಿದ್ದು ವಚನಕಾರರಿಗೆ ನುಂಗಲಾರದ ತುತ್ತಾಯಿತು.

ವಚನಕಾರರು ಈ ಮೇಲಿನ ಕ್ರೂರ ಪದ್ದತಿಯನ್ನು ತೀವ್ರವಾಗಿ ವಿರೋಧಿಸಿದರು. ಸಮಾಜದಲ್ಲಿ ತಾರತಮ್ಯ ಸಲ್ಲ, ಎಲ್ಲರು ಮನುಷ್ಯರೇ, ಮನುಷ್ಯರಂತೆ ಅವರಿಗೂ ಬಾಳಲು, ಬದುಕಲು ಬಿಡದೆಂದು ಹೋರಾಟ ಮಾಡಿದರು. ಇದನ್ನು ಹೋಗಲಾಡಿಸಲು ಕಾಯಕ, ದಾಸೋಹ ಪದ್ದತಿಯನ್ನು ರೂಡಿ ಮಾಡಿದರು. ಮೇಲ್ಜಾತಿ ಮತ್ತು ಕೆಲಜಾತಿಯವರ ವಿವಾಹ ಸಂಬಂಧವನ್ನು ಏರ್ಪಡಿಸಿದರು. ಹೀಗೆ ಹಲವಾರು ದೃಷ್ಟಿಕೋನದಿಂದ ಸಮಾಜದಲ್ಲಿ ಆಗುತ್ತಿರುವ ಅನ್ಯಾಯಕ್ಕೆ, ನ್ಯಾಯವನ್ನು ಒದಗಿಸಲು ಪ್ರಯತ್ನ ಪಟ್ಟವರೆಂದರೆ ವಚನಕಾರರು.

**ಉಪಸಂಹಾರ**

ಹೀಗೆ ವ್ಯಕ್ತಿ ವ್ಯಕ್ತಿಗಳಲ್ಲಿ ಅಸಮಾನತೆಯನ್ನು ಕಲ್ಪಿಸಿ ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆ, ದೌರ್ಜವ್ಯವೆಸಗುತ್ತಾ ಶತಶತಮಾನಗಳಿಂದಲೂ ಸಬಲರು ದುರ್ಬಲರ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿ ತುಳಿಯುತ್ತಾ ಶೋಷಣೆಗೈಯುತ್ತ ಬಂದಿದ್ದಾರೆ. ಇಂಥ ಸಮಾಜದ ವ್ಯವಸ್ಥೆಯ ದೋಷಗಳನ್ನು ಕಳೆದು ಸಮಾಜಕ್ಕೆ ಸತ್ಯರೂಪವನ್ನು ಕೊಡಲು ಕೆಲವು ಶತಮಾನಗಳಿಂದ ಸತ್ಯವಂತರು ಸಮಾಜ ಸುಧಾರಕರು ಹೃದಯವಂತರು ಉದಯಿಸಿ ಮಾರ್ಗದರ್ಶನ ನೀಡಿ ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯಗಳಿಗೆ ನ್ಯಾಯಕೊಡಿಸಲು ಪ್ರಯತ್ನಪಟ್ಟರು. ಆದರೂ ಸಮಾಜವು ನಾಯಿಯ ಬಾಲದಂತೆ ಡೊಂಕಾಗಿಯೇ ಉಳಿದಿರುವುದು ಇಂದಿಗೂ ದುರಂತ.

**ಪರಾಮರ್ಶನ ಗ್ರಂಥಗಳು**


- ಹಿರೇಮಠ. ಆರ್. ಸಿ. (1973). ಶೂನ್ಯಸಂಪಾದನೆ. ಕನ್ನಡ ಅಧ್ಯನಪೀಠ ಕರ್ನಾಟಕ ವಿ.ವಿ., ಧಾರವಾಡ.
- ಸುಂಕಾಪುರ. ಎಂ. ಎಸ್. (1977). ಪರಮಮೂಲಜ್ಞಾನ ಷಟ್‌ಸ್ಥಲ. ಕನ್ನಡ ಅಧ್ಯನಪೀಠ ಕರ್ನಾಟಕ ವಿ.ವಿ., ಧಾರವಾಡ.
- ತಿಪ್ಪೆರುದ್ರಸ್ವಾಮಿ.ಎಚ್. (1991). ಶರಣರ ಅನುಭಾವ ಸಾಹಿತ್ಯ. ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.
- ತಿಪ್ಪೆರುದ್ರಸ್ವಾಮಿ.ಎಚ್. (1978). ವಚನಗಳಲ್ಲಿ ವೀರಶೈವಧರ್ಮ. ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.